# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 1246 |
| 2 | ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀಮತಿ ಎಸ್.ವೀಣಾ ಅಚ್ಚಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು |
| 3 | ಉತ್ತರಿಸುವ ದಿನಾಂಕ | : | 23-12-2021 |
| 4 | ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೊಡಗು ಜಿಲ್ಲೆಯಲ್ಲಿ ವಾಸಿಸುತ್ತಿರುವ ಹಲವಾರು ಮಾಜಿ ಸೈನಿಕರ ಸೈನಿಕರ ಕಲ್ಯಾಣ ಮತ್ತು ಪುನರ್ವಸತಿಗೆ ಸಂಬಂಧಿಸಿದಂತೆ, ಮಾಜಿ ಸೈನಿಕರಿಂದ ಹಲವಾರು ಬಾರಿ ಮನವಿಗಳು ಈಗಾಗಲೇ ಸಲ್ಲಿಕೆಯಾಗಿದ್ದರೂ, ಯಾವುದೇ ಸ್ಪಂದನೆ ದೊರೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಕೊಡಗು ಜಿಲ್ಲೆಗೆ ಸಂಬಂಧಪಟ್ಟಂತೆ, ಮಾಜಿ ಸೈನಿಕರು, ಅವರ ಅವಲಂಬಿತರು ಹಾಗೂ ಯುದ್ಧ/ಯುದ್ಧದಂತಹ ಕಾರ್ಯಾಚರಣೆಯಲ್ಲಿ ಮಡಿದ ಯೋಧರ ಕುಟುಂಬದವರ ಮನವಿಗಳಿಗೆ ಸೂಕ್ತ ಸ್ಪಂದನೆಯನ್ನು ನೀಡಲಾಗಿದ್ದು, ಅವರುಗಳ ಕಲ್ಯಾಣಕ್ಕಾಗಿ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯು ನಿರಂತರವಾಗಿ ಶ್ರಮಿಸುತ್ತಿದ್ದು, ಅವರ ಕೋರಿಕೆಗಳನ್ನು ಕಾನೂನಿನ ಚೌಕಟ್ಟಿನೊಳಗೆ ಬಗೆಹರಿಸಲಾಗುತ್ತಿದೆ. . |
| ಆ) | ಬಂದಿದ್ದಲ್ಲಿ, ಕೊಡಗು ಜಿಲ್ಲೆಯಲ್ಲಿ ವಾಸಿಸುತ್ತಿರುವ ಮಾಜಿ ಸೈನಿಕರ ಕಲ್ಯಾಣ ಮತ್ತು ಪುನರ್ವಸತಿಗೆ ಸಂಬಂಧಿಸಿದಂತೆ, ಅವರ ನ್ಯಾಯಸಮ್ಮತ ಬೇಡಿಕೆಗಳಿಗೆ ಸರ್ಕಾರ ಇದುವರೆಗೆ ಸ್ಪಂದಿಸದಿರಲು ಕಾರಣಗಳೇನು: | |
| ಇ) | ಸೈನಿಕರ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯಿಂದ, ಜಿಲ್ಲೆಯಲ್ಲಿನ ಸೈನಿಕರ ನ್ಯಾಯಸಮ್ಮತ ಬೇಡಿಕೆಗಳಿಗೆ ಕೂಡಲೇ ಪರಿಹಾರ ದೊರಕಿಸಲು ಕ್ರಮಕೈಗೊಳ್ಳಲಾಗುವುದೇ. | ಜಿಲ್ಲೆಯ ಮಾಜಿ ಸೈನಿಕರ ನ್ಯಾಯಸಮ್ಮತ ಬೇಡಿಕೆಗಳನ್ನು ಕಾಲಮಿತಿಯೊಳಗೆ ಪರಿಹಾರ ನೀಡಲು ಶ್ರಮಿಸುತ್ತಿದ್ದು, ಇನ್ನು ಮುಂದೆಯೂ ಸಹ ಈ ನಿಟ್ಟಿನಲ್ಲಿ ಹೆಚ್ಚಿನ ಒತ್ತು ನೀಡಲಾಗುವುದು. |
| ಈ) | ಸೈನಿಕರ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯಿಂದ ಕಳೆದ 3 ವರ್ಷಗಳಲ್ಲಿ ಜಿಲ್ಲೆಯಲ್ಲಿನ ಸೈನಿಕರಿಗೆ ದೊರೆತಿರುವ ಸೌಲಭ್ಯ ಹಾಗೂ ನೆರವುಗಳೇನು (ವಿವರ ನೀಡುವುದು) | ಕಳೆದ ಮೂರು ವರ್ಷಗಳಲ್ಲಿ ಜಿಲ್ಲೆಯಲ್ಲಿನ ಮಾಜಿ ಸೈನಿಕರರಿಗೆ ನೀಡಲಾದ ಸೌಲಭ್ಯ ಹಾಗೂ ನೆರವುಗಳ ವಿವರಗಳ ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |

**ಸಂಖ್ಯೆ: ಒಇ 66 ಕಸೈಸೇ 2021**

(ಆರಗ ಜ್ಞಾನೇಂದ್ರ)
ಗೃಹ ಸಚಿವರು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಎಸ್.ವೀಣಾ ಅಚ್ಚಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:1246 ಕ್ಕೆ ಪೂರಕ ಟಿಪ್ಪಣಿ.**

ರಾಜ್ಯ ಸರ್ಕಾರವು ಯುದ್ಧ ಸಂತ್ರಸ್ತರಿಗೆ, ಮಾಜಿ ಸೈನಿಕರಿಗೆ ಮತ್ತು ಅವರ ಅವಲಂಬಿತರಿಗೆ ಹಲವಾರು ಸೌಲಭ್ಯಗಳನ್ನು ವಿಸ್ತರಿಸುತ್ತಿದೆ. ಯುದ್ಧ ಸಂತ್ರಸ್ತರಿಗೆ ನೀಡಲಾಗುವ ಸೌಲಭ್ಯಗಳ ವಿವರಗಳನ್ನು ಅನುಬಂಧ -1 ರಲ್ಲಿ ಒದಗಿಸಲಾಗಿದೆ. ಮಾಜಿ ಸೈನಿಕರಿಗೆ ಮತ್ತು ಅವರ ಅವಲಂಬಿತರಿಗೆ ರಾಜ್ಯ ಸರ್ಕಾರವು ನೀಡಲಾಗುವ ಸೌಲಭ್ಯಗಳ ವಿವರಗಳನ್ನು ಅನುಬಂಧ - 2 ರಲ್ಲಿ ಒದಗಿಸಲಾಗಿದೆ.

ಕೊಡಗು ಜಿಲ್ಲೆಯ ಎಲ್ಲಾ ಯುದ್ಧ ಸಂತ್ರಸ್ತರು ಮತ್ತು ಮಾಜಿ ಸೈನಿಕರಿಗೆ ರಾಜ್ಯ ಸರ್ಕಾರದಿಂದ ನೀಡಲಾಗುತ್ತಿರುವ ಎಲ್ಲಾ ಸೌಲಭ್ಯಗಳನ್ನು ಸಮರ್ಪಕವಾಗಿ ಒದಗಿಸಲಾಗಿರುತ್ತದೆ. ಮತ್ತು ಮಾಜಿ ಸೈನಿಕರ ಎಲ್ಲಾ ಮನವಿಗಳಿಗೆ ಇಲಾಖೆಯಿಂದ ಸೂಕ್ತವಾಗಿ ಸ್ಪಂದಿಸಲಾಗುತ್ತಿದೆ. ಉಳಿದಂತೆ 379 ಕೃಷಿ ಜಮೀನು ಮಂಜೂರಾತಿಯ ಪ್ರಕರಣಗಳು ಕಂದಾಯ ಇಲಾಖೆಯಲ್ಲಿ ಪರಿಶೀಲಿಸಲಾಗುತ್ತಿದೆ.

----------------000----------------

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಎಸ್.ವೀಣಾ ಅಚ್ಚಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು) ಇವರು ಮಂಡಿಸಿರುವ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:1246 ಕ್ಕೆ ಅನುಬಂಧ**

**ಕಳೆದ ಮೂರು ವರ್ಷಗಳಲ್ಲಿ ಜಿಲ್ಲೆಯಲ್ಲಿನ ಮಾಜಿ ಸೈನಿಕರರಿಗೆ ನೀಡಲಾದ ಸೌಲಭ್ಯ ಹಾಗೂ ನೆರವುಗಳ ವಿವರಗಳು:-**

| | | |
|---|---|---|
| 1 | ಮಾಜಿ ಸೈನಿಕರೆಂದು ನೀಡಿರುವ ಒಟ್ಟು ಗುರುತಿನ ಚೀಟಿ | 357 |
| 2 | ಮೃತ ಮಾಜಿ ಸೈನಿಕರ ಪತ್ನಿಯರಿಗೆ ನೀಡಿರುವ ಗುರುತಿನ ಚೀಟಿ | 192 |
| 3 | ಮಾಜಿ ಸೈನಿಕರನ್ನು ಉದ್ಯೋಗಕ್ಕಾಗಿ ನೋಂದಣಿ ಮಾಡಿದ ಸಂಖ್ಯೆ | 196 |
| 4 | ಮಾಜಿ ಸೈನಿಕರನ್ನು ಉದ್ಯೋಗಕ್ಕಾಗಿ ಪುರಸ್ಕರಿಸಿರುವ ಸಂಖ್ಯೆ | 409 |
| 5 | ಸರ್ಕಾರದಲ್ಲಿ ಖಾಯಂ ಆಗಿ ನೇಮಿಸಿಕೊಂಡಿರುವ ಮಾಜಿ ಸೈನಿಕರ ಸಂಖ್ಯೆ | 27 |
| 6 | ಮಾಜಿ ಸೈನಿಕರು, ಹಾಗೂ ಅವರ ಪತ್ನಿಯರಿಗೆ ಮನೆ ಕಂದಾಯ ವಿನಾಯಿತಿ ಪಡೆಯಲು ನೀಡುವ ಪ್ರಮಾಣ ಪತ್ರ | 337 |
| 7 | ಮಾಜಿ ಸೈನಿಕರ ಮಕ್ಕಳಿಗೆ ರಾಜ್ಯ ಸರ್ಕಾರದಿಂದ ನೀಡಿದ ಶಿಷ್ಯವೇತನ | 475220/- |
| 8 | ಜಿಲ್ಲೆಯ ಮಾಜಿ ಸೈನಿಕರ ಮಕ್ಕಳಿಗೆ ಪ್ರಧಾನ ಮಂತ್ರಿ ಶಿಷ್ಯ ವೇತನ | 6571220/- |
| 9 | ಹವಲ್ದಾರ್ ಹಾಗೂ ತತ್ಸಮಾನ ರ್‍ಯಾಂಕಿನ ಮತ್ತು ಕೆಳಗಿನ ರ್‍ಯಾಂಕಿನ ಮಾಜಿ ಸೈನಿಕರ, ಅವಲಂಬಿತರ ಮಕ್ಕಳಿಗೆ ಮಕ್ಕಳ ವಿದ್ಯಾಭ್ಯಾಸ ಭತ್ಯೆ | 9480000/- |
| 10 | ಮಾಜಿ ಸೈನಿಕರ ಮಕ್ಕಳಿಗೆ ಪ್ರವರ್ಗದಲ್ಲಿ ಕಾದಿರಿಸಿರುವ ಶಿಕ್ಷಣಕ್ಕಾಗಿ ಸೀಟುಗಳನ್ನು ಪಡೆಯಲು ನೀಡಿರುವ ಪ್ರಮಾಣ ಪತ್ರಗಳು | 174 |
| 11 | ಮಾಜಿ ಸೈನಿಕರ ಅವಲಂಬಿತರಿಗೆ ವಿವಧ ಉದ್ದೇಶಗಳಿಗೆ ನೀಡಿರುವ ಪ್ರಮಾಣ ಪತ್ರಗಳು | 63 |
| 12 | ಪಿಂಚಣಿರಹಿತ ಬಡ ಮಾಜಿ ಸೈನಿಕರಿಗೆ ವಾರ್ಷಿಕ ಧನ ಸಹಾಯ | 332000/- |
| 13 | ಮೃತ ಮಾಜಿ ಸೈನಿಕರಅವಲಂಬಿತರಿಗೆ ನೀಡಿರುವ ಮರಣ ಪರಿಹಾರಧನ ಸಹಾಯ | 740000/- |
| 14 | 65 ವರ್ಷ ಮೀರಿರುವ ನಿರ್ಗತಿಕ ಮಾಜಿ ಸೈನಿಕರಿಗೆ ಆರ್ಥಿಕ ನೆರವು | 4416000/- |
| 15 | ಮಾಜಿ ಸೈನಿಕರ ನಿವೃತ್ತಿ ನಂತರಕುಟುಂಬದಲ್ಲಿ ಆಗು ಬದಲಾವಣೆ ಬಗ್ಗೆ ಅಭಿಲೇಖಾಲಯದಿಂದ ಆದೇಶಗಳನ್ನು ಪಡೆಯುವಲ್ಲಿ ನೆರವು ನೀಡಿರುವುದು | 509 |
| 16 | ಮೃತ ಮಾಜಿ ಸೈನಿಕರ ಪತ್ನಿಯರಿಗೆ ಪಿಂಚಣಿ ಕಡತ ವಿಲೇವಾರಿ | 520 |
| 17 | ಸೇನಾ ಸಮೂಹ ವಿಮೆ ಮಾಜಿ ಸೈನಿಕರ ಪತ್ನಿಯರ ಕ್ಲೇಮುಗಳಿಗೆ ಪರಸ್ಕರಿಸಿರುವ ಪ್ರಕರಣ | 58 |
| 18 | ಜಿಲ್ಲೆಯ ಯೋಧರ ಶೌರ್ಯ ಪ್ರಶಸ್ತಿ ಪಡೆದವರಿಗೆ ನೀಡಿರುವಅನುದಾನ | 1134000/- |
| 19 | ಪ್ರಪಂಚದ ಎರಡನೇ ಮಹಾಯುದ್ಧದಲ್ಲಿ ಭಾಗವಹಿಸಿರುವ ಯೋಧರು/ಅಥವಾಅವರ ಪತ್ನಿಯರಿಗೆ ನೀಡಿರುವಗೌರವಧನ | 8778000/- |
| 20 | ಮಾಜಿ ಸೈನಿಕರ ಹೆಣ್ಣು ಮಕ್ಕಳಿಗೆ ಮದುವೆ ಅನುದಾನ | 3450000/- |

ಮುಂದುವರೆದು, ಜಿಲ್ಲೆಯ ತಾಲ್ಲೂಕುಗಳಲ್ಲಿ ಜಮೀನಿಗಾಗಿ ಮಾಜಿ ಸೈನಿಕರು ಅರ್ಜಿಗಳನ್ನು ನೀಡಿದ್ದು, ಸೆಪ್ಟಂಬರ್ 2020 ಕೊನೆಯಲ್ಲಿ ಸುಮಾರು 370 ಅರ್ಜಿಗಳು ಬಾಕಿಯಿರುವುದಾಗಿ ಕಂಡು ಬಂದಿದ್ದು, ಈ ಅರ್ಜಿಗಳನ್ನು ಹೋಬಳಿ ಮಟ್ಟದಲ್ಲಿ ಕಂದಾಯ ಅಧಿಕಾರಿಗಳು ಹಾಗೂ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಅಧಿಕಾರಿಯವರು ಪರಿಶೀಲಿಸಲಾಗಿ, ಬಹುತೇಕ ಪ್ರಕರಣಗಳಲ್ಲಿ (ಕೆಲವು ಅಕ್ರಮ ಸಕ್ರಮ ಪ್ರಕರಣಗಳನ್ನು ಹೊರತುಪಡಿಸಿ) ವಿಲೇವಾರಿಯಾಗಿರುತ್ತದೆ. ಹಾಲಿ ಮಡಿಕೇರಿ ತಾಲ್ಲೂಕಿನಲ್ಲಿ 340 ಅರ್ಜಿಗಳು, ವೀರಾಜಪೇಟೆ ತಾಲ್ಲೂಕಿನಲ್ಲಿ 114 ಹಾಗೂ ಸೋಮವಾರಪೇಟೆ 111 ಪ್ರಕರಣಗಳು ಬಾಕಿ ಇದ್ದು, ಸದರಿ ಪ್ರಕರಣಗಳಲ್ಲಿ ದಾಖಲಾತಿಗಳ ಕೊರತೆ, ಜಮೀನು ಲಭ್ಯತೆ ಬಗ್ಗೆ ಪರಿಶೀಲನೆ ಹಾಗೂ ಅಕ್ರಮ ಸಕ್ರಮ ಸಮಿತಿಯ ಸಭೆಯಲ್ಲಿ ಮಂಡಿಸಿ ವಿಲೇವಾರಿಗೆ ಬಾಕಿ ಇರುತ್ತದೆ. ಒಟ್ಟು ಮೂರು ಪ್ರಕರಣಗಳಲ್ಲಿ ಜಮೀನು ಮಂಜೂರು ಮಾಡಲಾಗಿರುತ್ತದೆ.

-----------00----------

# ಅನುಬಂಧ-1

**ಯುದ್ಧ ವಿಧವೆಯರಿಗೆ ಮತ್ತು ಯುದ್ಧ ಗಾಯಾಳುಗಳಿಗೆ ರಾಜ್ಯ ಸರ್ಕಾರದಿಂದ ವಿಸ್ತರಿಸಿರುವ ಸೌಲಭ್ಯಗಳು :-**

1. ಯುದ್ಧ ಹಾಗೂ ಯುದ್ಧದಂತಹ ಕಾರ್ಯಾಚರಣೆಯಲ್ಲಿ ಹುತಾತ್ಮರಾದ ಯೋಧರ ವಿಧವೆಯರಿಗೆ/ಅವಲಂಬಿತರಿಗೆ ಹಾಗೂ ಶೇಖಡ 50 ಕ್ಕಿಂತ ಹೆಚ್ಚಿನ ಅಂಗವೈಕಲ್ಯತೆಯನ್ನು ಯುದ್ಧ ಗಾಯಾಳುಗಳಿಗೆ ಈ ಕೆಳಕಂಡ ಸೌಲಭ್ಯಗಳನ್ನು ವಿಸ್ತರಿಸಲಾಗಿದೆ:-

   (ಅ). ಯುದ್ಧ ಹಾಗೂ ಯುದ್ಧದಂತಹ ಕಾರ್ಯಾರಣೆಯಲ್ಲಿ ಮಡಿದ ಯೋಧರ ಪತ್ನಿಯರಿಗೆ/ ಅವಲಂಬಿತರಿಗೆ ರೂ.5.00,000/- ಗಳನ್ನು ಹಾಗೂ ಶೇಖಡ 51 ಕ್ಕಿಂತ ಹೆಚ್ಚಿನ ಅಂಗವೈಕಲ್ಯತೆಯನ್ನು ಹೊಂದಿದ್ದಲ್ಲಿ ರೂ.1,00,000/- ಗಳ ಅನುಗ್ರಹ ಪೂರ್ವಕ ಅನುದಾನ ನೀಡಲಾಗುತ್ತಿದೆ.

   @ ಇದಲ್ಲದೇ, ಯುದ್ಧ ಹಾಗೂ ಯುದ್ಧದಂತಹ ಕಾರ್ಯಾರಣೆಯಲ್ಲಿ ಮಡಿದ ಯೋಧರ ಪತ್ನಿಯರಿಗೆ ಸನ್ಮಾನ್ಯ ಮುಖ್ಯ ಮಂತ್ರಿಯವರ ಪರಿಹಾರ ನಿಧಿಯಿಂದ ರೂ.25,00,000 ಗಳ ಅನುಗ್ರಹ ಪೂರ್ವಕ ಅನುದಾನವನ್ನು ಸಹ ದಿನಾಂಕ ಫೆಬ್ರವರಿ 2016 ರಿಂದ ನೀಡಲಾಗುತ್ತಿದೆ.

   (ಅ) ಎರಡು ಎಕರೆ ನೀರಾವರಿ ಅಥವಾ ನಾಲ್ಕು ಎಕರೆ ನೀರಾವರಿಯೇತರ ಅಥವಾ ಎಂಟು ಎಕರೆ ಬರಡು ಜಮೀನು ನೀಡಲಾಗುತ್ತಿದೆ. ಹಂಚಿಕೆಗಾಗಿ ಭೂ ಲಭ್ಯತೆ ಇಲ್ಲದಿದ್ದಲ್ಲಿ ರೂ.10,00,000/- ಗಳ ಅನುದಾನವನ್ನು ಪಡೆಯಲು ಒಪ್ಪಿಕೊಳ್ಳಬಹುದಾಗಿದೆ.

   (ಇ) ಅಧಿಕಾರಿ/ಕಿರಿಯ ಅಧಿಕಾರಿಗಳಿಗೆ ರೂ.6,00,000/- ಮತ್ತು ಇತರೆ ಶ್ರೇಣಿಯವರಿಗೆ ರೂ.4,50,000 ಗಳನ್ನು ಮನೆ ಕಟ್ಟಲು ಅನುದಾನವನ್ನು ನೀಡಲಾಗುತ್ತದೆ.

2. ಅಧಿಕಾರಿ/ಕಿರಿಯ ಅಧಿಕಾರಿಗಳಿಗೆ ಮತ್ತು ಇತರ ಶ್ರೇಣಿಯವರಿಗೆ 30x40 ಅಡಿಗಳಿಗೆ 40x60 ಅಡಿ ಅಳತೆಯ ಉಚಿತ ನಿವೇಶನವನ್ನು ಮತ್ತು ಯುದ್ಧ ವಿಧವೆಯರಿಗೆ/ಅವಲಂಬಿತರಿಗೆ ನಿವೇಶನದ ಬದಲಿಗೆ ನೀಡಲಾಗುವ ನಗದು ಅನುದಾನದ ವಿವರಗಳು ಈ ಕೆಳಕಂಡಂತಿವೆ:-

| ಪದವಿ | ಬೆಂಗಳೂರು | ಇತರೆ ಜಿಲ್ಲೆಗಳು |
|---|---|---|
| ಅಧಿಕಾರಿ/ಕಿರಿಯ ಅಧಿಕಾರಿಗಳ ಅವಲಂಭಿತರಿಗೆ | 25,00,000/- | 20,00,000/- |
| ಎನ್‌ಸಿಓ/ಇತರೆ | 20,00,000/- | 15,00,000/- |

3. ಯುದ್ಧ ವಿಧವೆಯರು/ಯುದ್ದದಲ್ಲಿ ಮಡಿದ ಯೋಧರ ಮಕ್ಕಳಿಗೆ ಉದ್ಯೋಗದಲ್ಲಿ ಮಾಜಿ ಸೈನಿಕರ ಕೋಟಾದಡಿಯಲ್ಲಿ 10% ಮೀಸಲಾತಿ.
4. ಯುದ್ಧ ಹಾಗೂ ಯುದ್ಧದಂತಹ ಕಾರ್ಯಾರಣೆಯಲ್ಲಿ ಮಡಿದ ಯೋಧರ ಪತ್ನಿಯರಿಗೆ/ ಅವಲಂಬಿತರಿಗೆ ಯುದ್ಧದಲ್ಲಿ ಅಂಗವೈಕಲ್ಯತೆಯನ್ನು ಹೊಂದಿರುವ ಯೋಧರ ಪ್ರತಿ ಹೆಣ್ಣು ಮಕ್ಕಳಿಗೆ ರೂ.1,00,000 ಗಳ ಅನುದಾನವನ್ನು ನೀಡಲಾಗುತ್ತಿದೆ.
5. ಪ್ರತಿ 15 ವರ್ಷಕ್ಕೊಮ್ಮೆ ರೂ.3,00,000 ಗಳನ್ನು ಸ್ವಂತ ಮನೆ ರಿಪೇರಿಗಾಗಿ ನೀಡಲಾಗುತ್ತದೆ.
6. ಸ್ವಂತ ಮನೆಯ ತೆರಿಗೆಯನ್ನು ಮರುಪಾವತಿ ನೀಡಲಾಗುತ್ತದೆ.
7. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಇವರ ವತಿಯಿಂದ ಕರ್ನಾಟಕ ರಾಜ್ಯದೊಳಗೆ ಉಚಿತವಾಗಿ ಪ್ರಯಾಣಿಸಲು ಅವಕಾಶ.
8. ಯುದ್ಧ ವಿಧವೆಯರನ್ನು ಅವರ ಅರ್ಹತೆಯ ಆಧಾರದಲ್ಲಿ ಸಹಾನುಭೂತಿ ಪೂರ್ವಕವಾಗಿ ರಾಜ್ಯ ಸರ್ಕಾರದ ಉದ್ಯೋಗಳಿಗೆ ಪರಿಗಣಿಸುವ ಕುರಿತು ಸರ್ಕಾರದ ಆದೇಶವನ್ನು ನಿರೀಕ್ಷಿಸಲಾಗುತ್ತಿದೆ.

---------------00---------------

## ಅನುಬಂಧ–2

### ಮಾಜಿ ಸೈನಿಕರು ಮತ್ತು ಅವರ ವಿಧವೆಯರಿಗೆ ರಾಜ್ಯ ಸರ್ಕಾರದ ವತಿಯಿಂದ ವಿಸ್ತರಿಸಿರುವ ಸೌಲಭ್ಯಗಳು :-

### 1. ಆರ್ಥಿಕ ನೆರವು:-

1. ಪ್ರಪಂಚದ 2ನೇ ಮಹಾಯುದ್ಧದಲ್ಲಿ ಸಕ್ರೀಯವಾಗಿ ಭಾಗವಹಿಸಿ ಪಿಂಚಣಿಯಿಲ್ಲದೇ ಬಿಡುಗಡೆಗೊಂಡ ಸೈನಿಕರು ಮತ್ತು ಅವರ ಮರಣಾ ನಂತರ ಅವರ ಪತ್ನಿಯರಿಗೆ ರಾಜ್ಯ ನೀಡಲಾಗುತ್ತಿದ್ದ ಮಾಸಿಕ ಗೌರವಧನದ ಮೊತ್ತ ರೂ.3,000/- ಗಳಿಂದ ರೂ. 6,000/- ಗಳಿಗೆ ಹೆಚ್ಚಿಸಿ ವಿತರಿಸಲಾಗುತ್ತಿದೆ.
2. ಪಿಂಚಣಿಯಿಲ್ಲದೇ ಬಿಡುಗಡೆಗೊಂಡ ಆರ್ಥಿಕ ಸಂಕಷ್ಟದಲ್ಲಿರುವ ಮಾಜಿ ಸೈನಿಕರಿಗೆ ಮತ್ತು ಮರಣಾ ನಂತರ ಅವರ ಪತ್ನಿಯರಿಗೆ ವಾರ್ಷಿಕ ಪರಿಹಾರ ಧನವೆಂದು ರೂ.4,000/- ಗಳನ್ನು ನೀಡಲಾಗುತ್ತಿದೆ.
3. ಮರಣ ಹೊಂದಿರುವ ಮಾಜಿ ಸೈನಿಕರ ಕ್ರಿಯಾವಿಧಿಗಾಗಿ ರೂ.4,000/- ಗಳನ್ನು ಪರಣ ಪರಿಹಾರ ಧನವೆಂದು ನೀಡಲಾಗುತ್ತಿದೆ.
4. ಯುದ್ಧ ಸಂತ್ರಸ್ತರ, ಮಾಜಿ ಸೈನಿಕರ ಹೆಣ್ಣು ಮಗಳ ಮದುವೆಗಾಗಿ ರೂ.5,000/- ಗಳನ್ನು ನೀಡಲಾಗುತ್ತಿದೆ.
5. ಇದಲ್ಲದೇ, ಕನ್ನಡಕ ಅನುದಾನ ರೂ.600/-, ಶ್ರವಣ ಸಾಧನ ರೂ.3,000/-,
   ಕೃತಕ ದಂತ ಅಳವಡಿಕೆಗಾಗಿ ರೂ.1,000/- ಕಾಂಟ್ಯಾಕ್ಟ್ ಲೆನ್ಸ್ (ಕಣ್ಣಿನ ಮಸೂರ) ರೂ.3,000/- ಹರ್ನಿಯಾ ಬೆಲ್ಟ್ ರೂ.1,500/- ಮತ್ತು ಸಸ್ಪೊಂಡಿಲಿಟಿಸ್ ಕಾಲರ್ ರೂ.1,500/- ಇತರೆ ಸೌಲಭ್ಯಗಳಿಗಾಗಿ ಆರ್ಥಿಕ ಧನ ಸಹಾಯ.
6. ಆರ್ಥಿಕ ಸಂಕಷ್ಟದಲ್ಲಿರುವ ಮಾಜಿ ಸೈನಿಕರು ಮತ್ತು ಅವರ ಅವಲಂಬಿತರಿಗೆ ಸ್ಥಳೀಯ ಧನ ಸಹಾಯ.
7. ಪಿಂಚಣಿ ಇಲ್ಲದ ಮಾಜಿ ಸೈನಿಕರಿಗೆ ಗಂಭೀರ ಕಾಯಿಲೆಗಳ ವೈದ್ಯಕೀಯ ಚಿಕಿತ್ಸೆಗಾಗಿ ಸೀಮಿತ ಮೊತ್ತ ರೂ.10,000/- ಗಳವರೆಗೆ ಸೌಲಭ್ಯ.
8. ಪುಣೆಯ ಕಿರ್ಕಿಯಲ್ಲಿರುವ ಪ್ಯಾರಾಲೆಜಿಕ್ ಪುನರ್ವಸತಿ ಕೇಂದ್ರದ ನಿವಾಸಿಗಳಿಗೆ ರೂ.1,00,000/- ಗಳ ಅನುದಾನ.
9. 1978 ಕಿಂತ ಮೊದಲು ಯುದ್ಧದಲ್ಲಿ ನಿಧನರಾದ ಸೈನಿಕರ ವಿಧವೆಯರಿಗೆ ಮಾಸಿಕ ಗೌರವಧನ ರೂ.3,000/-.

### 2. ಇತರೆ ಸೌಲಭ್ಯಗಳು:-

1. ಮಾಜಿ ಸೈನಿಕರಿಗೆ ರಾಜ್ಯ ಸರ್ಕಾರಿ ಉದ್ಯೋಗದಲ್ಲಿ ಎ.ಬಿ.ಸಿ.ಡಿ ವೃಂದದಲ್ಲಿ ಪಿಂಚಣಿ ಸಹಿತ ಸೇನಾ ಸೇವಾ ಅವಧಿ ಮತ್ತು ಮೂರು ವರ್ಷಗಳ ಹೆಚ್ಚುವರಿ ಅವಧಿಯ ಸೇಪಡೆಯ ವಯೋಮಿತಿ ಸಡಿಲಿಕೆಯೊಂದಿಗೆ 10% ಮೀಸಲಾತಿ.
2. ಆಸ್ತಿ ತೆರಿಗೆಯಲ್ಲಿ 50% ರಿಯಾಯಿತಿ.
3. ಕರ್ನಾಟಕ ರಾಜ್ಯ ಮೂಲ ನಿವಾಸಿಗಳಾದ ಸೈನ್ಯ ಸೇವಾ ನಿರತ/ಮಾಜಿ ಸೈನಿಕ ಸಿಬ್ಬಂದಿಯವರ ಮಕ್ಕಳಿಗೆ ವೃತ್ತಿಪರ ಉನ್ನತ ಶಿಕ್ಷಣದ ಬಿಇ, ಎಂಬಿಬಿಎಸ್, ಆಯುರ್ವೇದ, ಹೋಮಿಯೋಪತಿ, ಯುನಾನಿ ನೇಚುರೋಪತಿ ವಿಭಾಗದಲ್ಲಿ ಶಿಕ್ಷಣ ಪಡೆಯಲು ರಾಜ್ಯ ಶಿಕ್ಷಣ ಸಂಸ್ಥೆಗಳಲ್ಲಿ ಶೈಕ್ಷಣಿಕ ಅನುಕೂಲಗಳ ಮೀಸಲಾತಿ.
4. ಬೆಂಗಳೂರು ಅಭಿವೃದ್ಧಿ ಪ್ರಾಧೀಕಾರಗಳಿಂದ ವಸತಿ ಸ್ಥಳಗಳ ಹಂಚಿಕೆಯಲ್ಲಿ ಮಾಜಿ ಸೈನಿಕರಿಗೆ 10% ಮೀಸಲಾತಿ.
5. ಆದಾಯದ ಮಿತಿ ಹೊರತಾಗಿಯೂ ಸಹ ಆಶ್ರಯ ಯೋಜನೆಯಡಿಯಲ್ಲಿ ಹಂಚಿಕೆಯಾಗುವ ನಿವೇಶನ/ಮನೆಗಳಲ್ಲಿ 1% ರಷ್ಟು ಕರ್ನಾಟಕದ ಮಾಜಿ ಸೈನಿಕರಿಗೆ ಮೀಸಲಾತಿ.
6. ರಾಜ್ಯ ಸರ್ಕಾರಿ ಸೇವೆ ಸಲ್ಲಿಸುತ್ತಿರುವ ಮಾಜಿ ಸೈನಿಕರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಬಂಧನೆಗಳ ಪ್ರಕಾರ ಹಾಗೂ ಕೇಂದ್ರೀಯ ನಾಗರೀಕ ಸೇವಾ ನಿಯಮಾವಳಿ ಪ್ರಕಾರ ಮಿಲಿಟರಿಸೇವೆಗಳ ಅವಧಿ ಮತ್ತು ವೇತನ ನಿಗದಿ ಹಾಗೂ ಸೌಲಭ್ಯಗಳು ಪ್ರಯೋಜನಗಳು.
7. ಬೆಂಗಳೂರು, ಬೆಳಗಾವಿ, ವಿಜಯಪುರ, ದಾರವಾಡ, ಕಾರವಾರ, ಮಡಿಕೇರಿ, ಮೈಸೂರು, ಮಂಗಳೂರು, ಶಿವಮೊಗ್ಗ, ಬಾಗಲಕೋಟೆ ಮತ್ತು ಅಥಣಿ ಪ್ರದೇಶಗಳಲ್ಲಿ ಸೈನಿಕ ಆರಾಮ ಗೃಹಗಳ ಸೌಲಭ್ಯ.
8. ಬೆಳಗಾವಿ, ಅಥಣಿ, ಕಾರವಾರ, ವಿಜಯಪುರ, ಮತ್ತು ಮೈಸೂರು ಪ್ರದೇಶಗಳಲ್ಲಿ ಮಾಜಿ ಸೈನಿಕರ ಮಕ್ಕಳಿಗೆ ಮಿಲಿಟರಿ ಬಾಲಕರ ವಸತಿ ಗೃಹಗಳ ಸೌಲಭ್ಯ.
9. ದಾರವಾಡದಲ್ಲಿ ಮಾಜಿ ಸೈನಿಕರ ಹೆಣ್ಣು ಮಕ್ಕಳಿಗೆ ಮಿಲಿಟರಿ ಹೆಣು ಮಕ್ಕಳ ವಸತಿ ಗೃಹದಲ್ಲಿ ಉಚಿತ ಸೌಲಭ್ಯ.
10. ರಾಜ್ಯ ಸರ್ಕಾರಿ ಉದ್ಯೋಗದಲ್ಲಿ ಮಾಜಿ ಸೈನಿಕರಿಗೆ 10% ರಷ್ಟು ಇರುವ ಮೀಸಲಾತಿಯ ಸೌಲಭ್ಯಗಳ ಬಗ್ಗೆ ಎಲ್ಲಾ ಇಲಾಖೆಗಳು ತಮ್ಮ ಅಧಿಸೂಚನೆಗಳನ್ನು www.skarnatak.gov.in ನಲ್ಲಿ ಅಳವಡಿಸಲು ಸೂಚಿಸಲಾಗಿದೆ. "ನೇಮಕಾತಿ" ಎಂಬ ಗುರುತಿನ ಚಿನ್ಹೆಯನ್ನು ಮೆನು ಬಾರ್‌ನಲ್ಲಿ ಒದಗಿಸಲಾಗಿದೆ.
11. ಕೆಎಸ್‌ಐಡಿಸಿ/ಕೆಜಿಐಡಿ (ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ಮಂಡಳಿ) ಸಂಸ್ಥೆಯು ಅಭಿವೃದ್ಧಿ ಪಡಿಸುವ ಕೈಗಾರಿಕೆ ವಸಾಹತು/ಪ್ರದೇಶಗಳಲ್ಲಿ ಶೆಡ್ ಮತ್ತು ನಿವೇಶನಗಳಲ್ಲಿ ಹಿಂದುಳಿದ ವರ್ಗಗಳ ಪ್ರವರ್ಗ-I ಮತ್ತು 2ಎ, ಅಲ್ಪ ಸಂಖ್ಯಾತರಿಗೆ, ಅಂಗವಿಕಲರಿಗೆ ಮತ್ತು ಮಾಜಿ ಸೈನಿಕರಿಗೆ **10%** ಮೀಸಲಾತಿ.

------------00------------